# ಚಂದನವನದಲ್ಲಿ ಮೋಕ್ಷಿತಾ ಮೋಹರು

**'ಪಾರು' ಧಾರಾವಾಹಿ ಖ್ಯಾತಿಯ ನಟಿ ಮೋಕ್ಷಿತಾ ಪೈ ಚಂದನವನಕ್ಕೆ ಕಾಲಿಟ್ಟಿದ್ದಾರೆ. ಮೊದಲ ಸಿನಿಮಾ ಬಿಡುಗಡೆಯ ನಿರೀಕ್ಷೆಯಲ್ಲಿದ್ದು, ತಮ್ಮ ಕಿರುತೆರೆ ಹಾಗೂ ಚೊಚ್ಚಿಲ ಸಿನಿಮಾ ಅನುಭವವನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.**

■ ಸುಮಲತಾ ಎನ್.



**◆ ನಿಮ್ಮ ಅಭಿನಯದ ಚೊಚ್ಚಿಲ ಸಿನಿಮಾ ಹಾಗೂ ನಿಮ್ಮ ಪಾತ್ರದ ಕುರಿತು...**

'ಮಿಡಲ್‌ಕ್ಲಾಸ್ ರಾಮಾಯಣ'– ಹೆಸರೇ ಹೇಳುವಂತೆ ಮಧ್ಯಮ ವರ್ಗಕ್ಕೆ ಸಂಬಂಧಿಸಿದ ಸಿನಿಮಾ. ಹೀರೊಯಿನ್ ಎಂದಾಕ್ಷಣ ಗ್ಲಾಮರಸ್ ಆಗಿ ಕಾಣುತ್ತಾರೆಂಬ ನಿರೀಕ್ಷೆ ಸಹಜವಾಗಿರುತ್ತದೆ. ಆದರೆ ಇದರಲ್ಲಿ ನನ್ನದು ಡಿ ಗ್ಲಾಮ್ ಪಾತ್ರ ಎನ್ನಬಹುದು. ಈ ಸಿನಿಮಾ ಅವಕಾಶ ಬಂದಾಗ, ಸವಾಲಿನ ಪಾತ್ರ ಎನಿಸಿ ಒಪ್ಪಿಕೊಂಡೆ. ಸಿನಿಮಾದಲ್ಲಿ ನಟಿಗೆ ಆದ್ಯತೆ ಕೊಡುವುದು ಮುಖ್ಯ. ಇಡೀ ಕಥೆಯಲ್ಲಿ ಹೀರೊಯಿನ್ ಇರುತ್ತಾಳೆ. ಹೀರೊಯಿನ್‌ನಿಂದಲೇ ಶುರು, ಅವಳಿಂದಲೇ ಸಿನಿಮಾ ತಿರುವುಗಳನ್ನು ತೆಗೆದುಕೊಳ್ಳುತ್ತದೆ. ಈ ಅಂಶ ನನಗೆ ಮೆಚ್ಚುಗೆಯಾಗಿ, ಏಕೆ ಪ್ರಯತ್ನಿಸಬಾರದು ಎನಿಸಿ ಒಪ್ಪಿದೆ.

**◆ ನಿಮ್ಮ ಮೊದಲ ಅನುಭವದಲ್ಲಿ ಕಂಡಂತೆ ಸಿನಿಮಾಗಳು ಎದುರಿಸುತ್ತಿರುವ ಸದ್ಯದ ಸವಾಲು?**

ಎಷ್ಟೋ ಜನ ಸಿನಿಮಾಗಳನ್ನು ಮಾಡುತ್ತಾರೆ. ಆದರೆ ಆ ಸಿನಿಮಾಗಳ ಬಿಡುಗಡೆಯೇ ಕಷ್ಟವಾಗುತ್ತದೆ. ಚಿತ್ರೀಕರಣ ನಡೆದು ಬಿಡುಗಡೆಯೇ ಆಗದ ಎಷ್ಟೋ ಸಿನಿಮಾಗಳಿವೆ ಎಂಬುದನ್ನು ಕೇಳಿದ್ದೇನೆ. ಚಿತ್ರತಂಡದ ಶ್ರಮವೆಲ್ಲ ವ್ಯರ್ಥವಾದಂತೆ ಆಗುತ್ತದೆ.

**◆ 'ಪಾರು' ಕಲಿಸಿಕೊಟ್ಟ ಪಾಠಗಳು...**

ಕಿರುತೆರೆಯಲ್ಲಿ ಒಳ್ಳೆಯ ಜನಪ್ರಿಯತೆ ಸಿಕ್ಕಿತು. ನಾನು ಅಭಿನಯಿಸಿದ್ದ 'ಪಾರು' ಬ್ಲಾಕ್‌ಬಸ್ಟರ್ ಆಗಿತ್ತು. ಜನರ ಪ್ರೀತಿಯಿಲ್ಲದೇ ಒಂದು ಧಾರಾವಾಹಿ ಐದೂವರೆ ವರ್ಷ ನಡೆಯಲು ಸಾಧ್ಯವೇ ಇಲ್ಲ. ಯಾವುದೇ ನಿರೀಕ್ಷೆಯಿಲ್ಲದೆ ಕಿರುತೆರೆಗೆ ಬಂದಿದ್ದೆ. ಈಗ ಒಂದು ಒಳ್ಳೆಯ ಸಿನಿಮಾ ಕೊಡಬೇಕು ಎಂಬ ನಿರೀಕ್ಷೆಯೊಂದಿಗೆ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿದ್ದೇನೆ. ಕಿರುತೆರೆ ವೃತ್ತಿಪರತೆಯನ್ನು ಕಲಿಸಿಕೊಟ್ಟಿತು. ಒಂದು ಕೆಲಸ ವಹಿಸಿದರೆ ಏನೇ ತೊಂದರೆಯಾದರೂ ಅದನ್ನು ಬಿಟ್ಟುಕೊಡದೆ ಪೂರ್ಣ ಮಾಡಬೇಕೆಂಬ ಬದ್ಧತೆಯನ್ನು ಇನ್ನಷ್ಟು ಹರಿತಗೊಳಿಸಿತು. 'ಪಾರು' ಧಾರಾವಾಹಿಯಲ್ಲಿ ನಟಿಸಿದ್ದರಿಂದ ಜವಾಬ್ದಾರಿಯ ಹಲವು ಆಯಾಮಗಳು ಮನವರಿಕೆಯಾದವು.

**◆ 'ಬಿಗ್ ಬಾಸ್' ಮನೆಯ ನೆನಪುಗಳು...**

'ಬಿಗ್ ಬಾಸ್' ಸಾಕಷ್ಟು ವಿಷಯಗಳನ್ನು ಕಲಿಸಿಕೊಟ್ಟಿತು. ತುಂಬಾ ತಾಳ್ಮೆಯನ್ನು, ಮಾತಿಗಿರುವ ಮೌಲ್ಯವನ್ನು ತಿಳಿಸಿಕೊಟ್ಟಿತು. ಬಿಗ್ ಬಾಸ್ ಮನೆಯಲ್ಲಿ ಮಾತನಾಡಲು ಒಂದು ಸಮಯ ಕೊಡುತ್ತಾರೆ. ಆ ಸಮಯದವರೆಗೂ ಕಾಯಬೇಕು. ಕಾಯದೆ ಬೇರೆ ಸಮಯದಲ್ಲಿ ಮಾತಾಡಿದರೆ ಅದಕ್ಕೆ ಬೆಲೆ ಇರುವುದಿಲ್ಲ. ಜೀವನದಲ್ಲಿ ನಮ್ಮ ಸಮಯಕ್ಕಾಗಿ ನಾವು ಕಾದು ಮಾತಾಡಬೇಕು ಎಂಬುದನ್ನು ನನಗೆ ಬಿಗ್ ಬಾಸ್ ಕಲಿಸಿಕೊಟ್ಟಿತು.

**◆ ಯಾವ ರೀತಿಯ ಪಾತ್ರಗಳಲ್ಲಿ ತೊಡಗಿಕೊಳ್ಳುವ ಅಭಿಲಾಷೆಯಿದೆ?**

ಚಾಲೆಂಜಿಂಗ್ ಎನ್ನಿಸುವಂಥ ಪಾತ್ರಗಳನ್ನು ನಿರ್ವಹಿಸಬೇಕು, ಅಭಿನಯಕ್ಕೆ ಆಸ್ಪದವಿರುವಂಥ, ನಟನಾ ಕೌಶಲ ಎದ್ದುತೋರುವಂಥ ಪಾತ್ರಗಳನ್ನು ಮಾಡಬೇಕು ಎನ್ನುವ ಅಭಿಲಾಷೆಯಿದೆ.

**◆ ನಿಮ್ಮ ಮುಂದಿನ ಹಾದಿಯಲ್ಲಿ...**

'ಮಿಡಲ್‌ಕ್ಲಾಸ್ ರಾಮಾಯಣ' ಬಿಡುಗಡೆಗೆ ಸಿದ್ಧವಾಗಿದೆ. ಮತ್ತೊಂದು ಸಿನಿಮಾ ಮಾತುಕತೆ ನಡೆಯುತ್ತಿದೆ. ■